ನೀರಾವರಿ ಪಂಪ್‌ಸೆಂಟ್‌ಗಳಿಗೆ ಸರಬರಾಜು ಮಾಡುವ ವಿದ್ಯುತ್

722 - ಶ್ರೀ ಎಸ್.ವಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್‌ಚ್ಛಕ್ತಿಯಲ್ಲಿ ಶೇಕಡ ಎಷ್ಟು ಭಾಗ ನೀರಾವರಿ ಪಂಪ್‌ಸೆಟ್‌ಗಳಿಗಾಗಿ ಖರ್ಚಾಗುತ್ತಿದೆ?

ಆ) ಎಷ್ಟು ಕುಟುಂಬಗಳು ನೀರಾವರಿ ಪಂಪ್‌ಸೆಟ್ ಬಳಸುತ್ತಿವೆ?

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) 1994-95ರ ಸಾಲಿನಲ್ಲಿ ರಾಜ್ಯದಲ್ಲಿ ಲಭ್ಯವಿರುವ ಒಟ್ಟು ವಿದ್ಯುಚ್ಛಕ್ತಿಯಲ್ಲಿ ಶೇಕಡ 45.9 ರಷ್ಟು ವಿದ್ಯುತ್ತನ್ನು ನೀರಾವರಿ ಪಂಪುಸೆಟ್ಟುಗಳಿಗೆ ಖರ್ಚಾಗುತ್ತಿದೆ.

ಆ) ಜನವರಿ 96ರ ಅಂತ್ಯದಲ್ಲಿರುವಂತೆ ರಾಜ್ಯದಲ್ಲಿರುವ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ 10,06,544.

ಬೆಂಗಳೂರು - ಮೈಸೂರು ಹೈವೇ ನಿರ್ಮಾಣ

296 - ಶ್ರೀ ಇ. ಮಾರುತಿರಾವ್ (ನರಸಿಂಹರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು - ಮೈಸರು ಮಧ್ಯೆ ಎಕ್ಸ್‌ಪ್ರೆಸ್ ಹೈವೇ ನಿರ್ಮಾಣದ ಕಾಮಗಾರಿ ಪ್ರಾರಂಭವಾಗಿದೆಯೇ?

ಆ) ಪ್ರಾರಂಭವಾಗದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು, ಪ್ರಾರಂಭವಾಗಿದ್ದಲ್ಲಿ ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಲಾಗುವುದು.

ಇ) ಇದಕ್ಕೆ ಸಂಬಂಧಪಟ್ಟ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ ಇದರ ಒಟ್ಟು ಖರ್ಚು ಎಷ್ಟು; ಹಾಲಿ ಎಷ್ಟು ಹಣ ಇದಕ್ಕೆ ವಿನಿಯೋಗವಿದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ

ಆ) ಶೀಘ್ರದಲ್ಲಿ ಪ್ರಾರಂಭಿಸುವುದಕ್ಕೆ ಏರ್ಪಾಡು ಮಾಡಲಾಗುತ್ತದೆ. ಈ ಯೋಜನೆಯನ್ನು ಪ್ರಾರಂಭಿಸಿದ 3 ವರ್ಷಗಳಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿರುತ್ತದೆ.

ಇ) ಈ ಯೋಜನೆಯನ್ನು ಖಾಸಗಿ ಉದ್ಯಮಶೀಲರು ತಮ್ಮ ಸ್ವಂತ ಮೂಲಗಳಿಂದ ಹಣ ತೊಡಗಿಸಿ ಅದನ್ನು 30 ವರ್ಷಗಳ ಕಾಲ ನಿರ್ವಹಿಸಿ ಖರ್ಚು ವೆಚ್ಚಗಳನ್ನು ಟೋಲ್ ಸಂಗ್ರಹದಿಂದ ಭರಿಸಿ, ನಂತರ ಸರ್ಕಾರಕ್ಕೆ ಮುಪ್ಪತ್ತಾಗಿ ಬಿಟ್ಟುಕೊಡುವ ಯೋಜನೆಯಾಗಿರುತ್ತದೆ. ಈ ಬಗ್ಗೆ ಭೂಸ್ವಾಧೀನ ಇತ್ಯಾದಿ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ. ಸದರಿ ವೇಗದ ಹೆದ್ದಾರಿಯ ಅಂದಾಜು ಸುಮಾರು 800 ಕೋಟಿ ರೂ.ಗಳಾಗುತ್ತದೆ. ಸರ್ಕಾರದ ಮತಿಯಿಂದ ಯಾವುದೇ ವೆಚ್ಚವಿರುವುದಿಲ್ಲ.

ಮೈಸೂರಿನ ಕೈಗಾರಿಕಾ ವಲಯಕ್ಕೆ ಹಾಲಿ ವಿದ್ಯುತ್ ಬೇಡಿಕೆಯ ಬಗ್ಗೆ

310 - ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರಿನ ಕೈಗಾರಿಕಾ ವಲಯಕ್ಕೆ ಹಾಲಿ ವಿದ್ಯುತ್ ಬೇಡಿಕೆಯ ಪ್ರಮಾಣವೆಷ್ಟು?

ಆ) ಮೈಸೂರು ನಗರವು ಕೈಗಾರಿಕೆ ದೃಷ್ಟಿಯಿಂದ ವ್ಯಾಪಕ ಬೆಳವಣಿಗೆಯಾಗುತ್ತಿರುವುದರಿಂದ ಮುಂದಿನ ಮೂರು ವರ್ಷದ ನಂತರ ವಿದ್ಯುತ್ ಬೇಡಿಕೆಯ ಪ್ರಮಾಣವನ್ನು ಅಂದಾಜು ಮಾಡಲಾಗಿದೆಯೇ.